

# ಮೆಲುದನಿ

(ವಿಮರ್ಶಾ ಲೇಖನಗಳು)

ಡಾ. ಪುರುಷೋತ್ತಮ ಬಿಳಿಮಲೆ

# ಮೆಲುದನಿ

(ವಿಮರ್ಶಾ ಲೇಖನಗಳು)

ಡಾ. ಪುರುಷೋತ್ತಮ ಬಿಳಿಮಲೆ

೧೯೬೭ನೇ ಇಸವಿಯ ಫೆಬ್ರವರಿ ತಿಂಗಳು. ನಾನಾಗ ಪಂಜ ಪ್ರೌಢ ಶಾಲೆಯಲ್ಲಿ ಎಂಟನೇ ತರಗತಿಯ ವಿದ್ಯಾರ್ಥಿ. ನಮಗೆ ಕನ್ನಡ ಕಲಿಸುತ್ತಿದ್ದ ಶ್ರೀ ಟಿ ಜಿ ಮುಡೂರು ಅವರು ಶಾಲಾ ವಾರ್ಷಿಕೋತ್ಸವಕ್ಕಾಗಿ 'ಧರ್ಮಾಧಿಕಾರಿಯ ದೀಪಸ್ತಂಭಗಳು' ಎಂಬ ನಾಟಕವನ್ನು ಆರಿಸಿ ಕೊಂಡಿದ್ದರು. ವಿಕ್ಟರ್ ಹ್ಯೂಗೋನ 'ಲಾ ಮಿಸರೇಬಲ್' ಎಂಬ ಕಾದಂಬರಿಯ ಆರಂಭದ ಒಂದು ಪ್ರಸಂಗವನ್ನು ಆಧರಿಸಿ ರಚಿತವಾದ ನಾಟಕವದು. ಕಪ್ಪಗೆ ಕುಳ್ಳಗಾಗಿದ್ದ ನನ್ನ ಗುಂಗುರು ಕೂದಲನ್ನು ಕಂಡ ಮುಡೂರು ಅವರು ನನ್ನನ್ನು ನಾಟಕದಲ್ಲಿನ 'ಕಳ್ಳ'ನ ಪಾತ್ರಕ್ಕೆ ಆಯ್ಕೆ ಮಾಡಿದರು. ನಾಟಕದಲ್ಲಿ ಕಳ್ಳನು ಕದಿಯಲು ಬಂದಾಗ ಧರ್ಮಾಧಿಕಾರಿ ಯೊಬ್ಬ ಅವನನ್ನು ಕ್ಷಮಿಸಿ, ಆದರಿಸಿ, ರಕ್ಷಿಸುತ್ತಾನೆ. ಆ ಧರ್ಮಾಧಿ ಕಾರಿಯ ಮತ್ತು ಕಳ್ಳನ ವ್ಯಕ್ತಿತ್ವಗಳು ನನ್ನ ಮನಸ್ಸಿನಲ್ಲಿ ಒಟ್ಟೊಟ್ಟಿಗೆ ಆಳವಾಗಿ ಉಳಿದುಬಿಟ್ಟತು. ಪಂಜದಿಂದ ಬಿಳಿಮಲೆಯ ವರೆಗೆ ನಡೆಯಬೇಕಾಗಿದ್ದ ಒಂಬತ್ತು ಕಿಮೀ ದೂರದ ಕಾಡಿನ ಹಾದಿಯುದ್ದಕ್ಕೂ 'ಆಗ ನಾನು ಮನುಷ್ಯನಾಗಿದ್ದೆ.. ಈಗ ಮನುಷ್ಯನಲ್ಲ.. ಮೃಗ.. ಮರಣಾವಸ್ಥೆಯಲ್ಲಿದ್ದ ಹೆಂಡತಿಯನ್ನು ಉಳಿಸಲೆಂದು ಕಳ್ಳತನ ಮಾಡಿ ಕಳ್ಳನಾದೆ.. ಈಗ ನನಗೆ ಹೆಸರೂ ಇಲ್ಲ.. ಬರೇ ನಂಬರು...' ಎಂದು ಹೇಳುವ ಕಳ್ಳನ ಮಾತುಗಳನ್ನು ಗಟ್ಟಿಯಾಗಿ ಹೇಳಿಕೊಂಡು ನಡೆಯುತ್ತಾ ಕಾಡಿನ ಭಯದಿಂದ ಪಾರಾಗುತ್ತಿದ್ದೆ. ಪ್ಯಾರಿಸ್‌ನಿಂದ ಸುಮಾರು ೩೦ ಕಿಮೀ ದೂರದ ಹಳ್ಳಿಯಲ್ಲಿ ನಡೆದ ಘಟನೆಯನ್ನು ಬಂಟಮಲೆಯ ಬುಡದ ಪಂಜದಲ್ಲಿ ಪುನರ್‌ಸೃಷ್ಟಿಸಿದ ಮುಡೂರು ಅವರು ಒಂದು ಸೋಜಿಗವಾಗಿ ನನ್ನಲ್ಲಿ ಉಳಿದುಬಿಟ್ಟರು.

ಶ್ರೀ ಟಿ ಜಿ ಮುಡೂರು ಅವರಿಗೆ ಈ ಪುಸ್ತಕವನ್ನು ಅರ್ಪಿಸುತ್ತಿದ್ದೇನೆ.

# ಸವಿನುಡಿ

ಅಕ್ಷರ ಜೋಡಣೆ, ಪುಸ್ತಕ ವಿನ್ಯಾಸಗಳಲ್ಲೇ ತೊಡಗಿ ಹಲವಾರು ವರ್ಷಗಳೇ ಕಳೆದು ಹೋಗಿವೆ. ನಾವು ವಿನ್ಯಾಸಗೊಳಿಸಿದ ಪುಸ್ತಕಗಳನ್ನು ಕಂಡಾಗಲೆಲ್ಲ ಒಂದು ತೆರನ ಖುಷಿ. ಪುಸ್ತಕಗಳನ್ನು ಕಂಡಾಗ ಅವುಗಳ ವಿನ್ಯಾಸಗಳನ್ನು ಪರಿಶೀಲಿಸುವುದು ಅಭ್ಯಾಸ. ಹೊಸ ಹೊಸ ವಿನ್ಯಾಸಗಳ ಪುಸ್ತಕಗಳನ್ನು ನೋಡಿದಾಗ ಸಂತೋಷವಾಗುತ್ತದೆ. ನೋಡಿದ ಪುಸ್ತಕಗಳನ್ನು ನೆನಪಿನಲ್ಲಿಟ್ಟುಕೊಂಡು ವಿಶಿಷ್ಟವಾದ ಪುಸ್ತಕಗಳನ್ನು ರೂಪಿಸು ವುದು ಹಾಗೂ ಅವುಗಳು ಇನ್ನಷ್ಟು ಸುಂದರವಾಗುವಂತೆ ಮಾಡಬೇಕೆಂಬ ಕಾಳಜಿಯನ್ನು ಪ್ರೀತಿಯಿಂದ ಮಾಡುತ್ತ ಬಂದಿದ್ದೇವೆ. ಹಲವಾರು ಪುಟಗಳ ಪುಸ್ತಕಗಳನ್ನು ಕಡಿಮೆ ಅವಧಿಯಲ್ಲಿ ರೂಪಿಸಬೇಕಾದ ಅನಿ ವಾರ್ಯತೆಯ ನಡುವೆಯೂ ಹಗಲಿರುಳು ಶ್ರಮಿಸಿದ್ದೇವೆ. ಈ ನಮ್ಮ ಶ್ರಮವನ್ನು ಕುರಿತಂತೆ ಮೆಚ್ಚುಗೆ ಸೂಚಿಸಿದವರು ಹಲವರು. ನೀವೇ ಯಾಕೆ ಪುಸ್ತಕ ಪ್ರಕಟಿಸಬಾರದು? ಎಂದು ಪ್ರಶ್ನಿಸಿದವರು ಮತ್ತೆ ಕೆಲವರು. ಹಾಗೆ ಹಲವರ, ಕೆಲವರ ಅಭಿಪ್ರಾಯಗಳು ನಮ್ಮಲ್ಲಿ ಘನೀಭವಿಸಿ ಪುಸ್ತಕ ಪ್ರಕಾಶನದ ಕೆಲಸಕ್ಕೆ ಮುಂದಾಗಿದ್ದೇವೆ.

ಹಣ ಹೊಂದಿಸಿದರೆ ಪುಸ್ತಕ ಪ್ರಕಟಿಸುವುದು ಸುಲಭವಿರಬಹುದು. ಆದರೆ ಪುಸ್ತಕಗಳನ್ನು ಓದುಗರಿಗೆ ತಲುಪಿಸುವ ಮಾರಾಟದ ವ್ಯವಸ್ಥೆ ಮುಖ್ಯವಾದುದು. ಈ ಬಗೆಗೆ ಸಂಪರ್ಕಿಸಿದಾಗ ಸಹಕರಿಸಿದವರು ಬೆಂಗಳೂರಿನ 'ಪೇಜ್ ವರ್ಲ್ಡ್ ಇಂಡಿಯಾ'ದ ಬಂಧುಗಳು. ಈ ರೀತಿ ಹಲವರ ಸಹಾಯ ಹಸ್ತಗಳ ಸಹಕಾರವೂ ಜೊತೆಯಾಯಿತು. ನಮ್ಮ ಪ್ರಕಾಶನದ ಮೂಲಕ ಬರುವ ಪುಸ್ತಕ ಸುಂದರವಾಗಿರಬೇಕು ಎಂಬ ಕಾಳಜಿಯೊಡನೆ ಸಮಕಾಲೀನ ಓದುಗರು ಸ್ಪಂದಿಸುವ ಹೂರಣ ವನ್ನು ಹೊಂದಿರಬೇಕು ಎಂಬುದೂ ಅಷ್ಟೇ ಮುಖ್ಯವಾಗಿದೆ.

ಸಂಸ್ಕೃತಿ ಪ್ರತೀಕವಾದ ಪುಸ್ತಕ ಪ್ರಕಾಶನಕ್ಕೆ ಮುಂದಾದಾಗ ನಮ್ಮನ್ನು ಅನೇಕ ಜನ ಲೇಖಕರು ಸಂಪರ್ಕಿಸಿದರು, ಕೆಲವರು ಹಸ್ತಪ್ರತಿ ನೀಡಿದರು. ಆದರೆ ಅವೆಲ್ಲವುಗಳನ್ನು ಪ್ರಕಟಿಸುವ ಉದ್ದೇಶ ನಮಗಿದ್ದರೂ ನಮಗೆ ಒಮ್ಮೆಗೇ ಸಾಧ್ಯವಾಗದ ಕೆಲಸ. ಅವುಗಳಲ್ಲಿ ಆಯ್ಕೆ ಮಾಡಿ ಆದ್ಯತಾನು ಸಾರ ಪ್ರಕಟಿಸುವಲ್ಲಿ ನಮ್ಮ ಪ್ರಕಾಶನದ ಹಿತೈಷಿಗಳ ಸಲಹೆ ಸೂಚನೆಗಳನ್ನು ಪಡೆದಿದ್ದೇವೆ. ನಮ್ಮ ಪ್ರಕಾಶನದ ಬಳಗ ದೊಡ್ಡದು. ಅವರ ಸ್ನೇಹಹಸ್ತವೇ

ನಮಗೆ ಬೆಂಬಲ. ಅದನ್ನೇ ನಂಬಿ ಪ್ರಕಟಣ ಕ್ಷೇತ್ರದಲ್ಲಿ ಮೆಲ್ಲಡಿಯಿಡು ತ್ತಿದ್ದೇವೆ. ಸಾಹಿತ್ಯ, ಸಂಶೋಧನೆ, ಅನುವಾದ, ತಂತ್ರಜ್ಞಾನ, ವೈದ್ಯಕೀಯ, ಶಿಕ್ಷಣ, ವಿಜ್ಞಾನ, ಅಭಿವೃದ್ಧಿ, ಕತೆ, ಕಾದಂಬರಿ, ನಾಟಕ ಮುಂತಾದ ಎಲ್ಲಾ ಪ್ರಕಾರಗಳ ಪ್ರಕಟಣೆಯನ್ನೂ ನಮ್ಮ ಪ್ರಕಾಶನದ ಮೂಲಕ ಮಾಡಬೇಕೆಂಬ ಯೋಚನೆಯಿದೆ. ನಮಗೆ ನಿರ್ದಿಷ್ಟವಾದ ಅಜೆಂಡಾಗಳೇನೂ ಇಲ್ಲ. ಯಾವುದೇ ವಿಷಯಕ್ಕೆ ಸಂಬಂಧಿಸಿದ್ದಾದರೂ ಸರಿ, ಉತ್ತಮ ಪುಸ್ತಕಗಳನ್ನು ಪ್ರಕಟಿಸಬೇಕೆಂಬುದು ನಮ್ಮ ಹೆಬ್ಬಯಕೆ. ಇದಕ್ಕೆಲ್ಲ ಲೇಖಕರ, ಕೊಂಡು ಓದುವ ಓದುಗರ ಸಹಕಾರವೂ ಅಗತ್ಯ. ಅದನ್ನು ಕೊಡುವ ಸನ್ಮನಸುಳ್ಳ ಗೆಳೆಯರನ್ನು ನಂಬಿ ಹೀಗೊಂದು ಸಾಹಸ.

ಡಾ. ಪುರುಷೋತ್ತಮ ಬಿಳಿಮಲೆಯವರ ಓದು ಎಷ್ಟು ವ್ಯಾಪಕವಾದುದು ಎಂಬುದಕ್ಕೆ ಇಲ್ಲಿನ ಲೇಖನಗಳು ಹಾಗೂ ಮುನ್ನುಡಿಗಳೇ ಸಾಕ್ಷಿ ನುಡಿಯುತ್ತವೆ. ಹಿರಿಯ-ಕಿರಿಯ ಬರಹಗಾರರು ಎಂಬ ಭೇದವಿಲ್ಲದೆ ಎಲ್ಲರನ್ನೂ ಓದುವ, ಓದಿದುರ ಬಗೆಗೆ ನಾಲ್ಕು ಮಾತು ಬರೆದು ಗುಣಾವಗುಣಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳುವ ಪ್ರಾಮಾಣಿಕ ನಿಷ್ಠೆ ಇಲ್ಲಿನ ಲೇಖನಗಳಲ್ಲಿ ವ್ಯಕ್ತವಾಗಿದೆ. ಸಾಹಿತ್ಯ, ಜಾನಪದ ವಲಯಗಳಲ್ಲಿ ಪ್ರಮುಖ ಚಿಂತಕರೂ ಬರಹಗಾರರೂ ಆದ ಡಾ. ಬಿಳಿಮಲೆಯವರ ಮುನ್ನುಡಿಗಳಲ್ಲಿ ಬರಹಗಾರರು ಸಾಗುವ ದಿಕ್ಕನ್ನು ಖಚಿತವಾಗಿ ತೆರೆದು ತೋರಿಸುವ ಗುಣವಿದೆ. ಎಲ್ಲವನ್ನು ವಸ್ತುನಿಷ್ಠವಾಗಿ ಪರಿಗ್ರಹಿಸುವ ದೃಷ್ಟಿಕೋನವೊಂದು ಇಲ್ಲಿ ಗಮನಸೆಳೆಯುತ್ತದೆ. ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಯಾಜಿ ಪ್ರಕಾಶನದ ಪರವಾಗಿ ವಂದನೆಗಳು.

ಮುದ್ರಣದ ಹೊಣೆ ಹೊತ್ತ ಬೆಂಗಳೂರಿನ ಇಳಾ ಮುದ್ರಣದ ಶ್ರೀ ಗುರುಮೂರ್ತಿ ಮತ್ತು ಬಳಗ, ಈ ಪುಸ್ತಕದ ಮುಖಪುಟ ವಿನ್ಯಾಸವನ್ನು ಡಾ. ಟಿ ಎಸ್ ವಿವೇಕಾನಂದ ಅವರು, ಹಾಗೆಯೇ ಪ್ರಕಾಶನದ ಹಿತೈಷಿ ಬಳಗಕ್ಕೆ –ಎಲ್ಲರಿಗೂ ಯಾಜಿ ಪ್ರಕಾಶನದ ಪರವಾಗಿ ಹೃತ್ಪೂರ್ವಕವಾದ ಕೃತಜ್ಞತೆಗಳು.

**ಸವಿತಾ ಯಾಜಿ**

ಪ್ರಕಾಶಕರು

# ಮೆಲುದನಿಯ ಕುರಿತು

ಕರ್ನಾಟಕ ಬಿಟ್ಟು ಸುಮಾರು ೧೭ ವರ್ಷಗಳೇ ಕಳೆದುವು. ಒಂದೆರಡು ಅಪವಾದಗಳನ್ನು ಹೊರತುಪಡಿಸಿದರೆ, ಈ ಅವಧಿಯಲ್ಲಿ ಕರ್ನಾಟಕದಿಂದ ಯಾರಾದರೂ ವಿಚಾರ ಸಂಕಿರಣಕ್ಕಾಗಲೀ ಭಾಷಣಕ್ಕಾಗಲೀ ಕರೆದದ್ದು ಕಡಿಮೆಯೆಂದೇ ಹೇಳಬಹುದು. ಕಾರಣ ಕರ್ನಾಟಕದ ಬೌದ್ಧಿಕ ಚರ್ಚೆಗಳಲ್ಲಿ ಪಾಲುಗೊಳ್ಳಲು ಹೆಚ್ಚಿನ ಅವಕಾಶವಾಗಲಿಲ್ಲ. ನಾನು ವಾಸಿಸುವ ದೆಹಲಿಯಲ್ಲಿ ಕನ್ನಡದ ಪುಸ್ತಕಗಳು ದೊರಕುವುದೂ ಇಲ್ಲ, ಕನ್ನಡದ ಬಗ್ಗೆ ಮಹತ್ವದ ಚರ್ಚೆಗಳು ನಡೆದದ್ದೂ ಇಲ್ಲ. ರಾಜಧಾನಿಯಲ್ಲಿ ಕನ್ನಡದ ಮತ್ತು ಕರ್ನಾಟಕದ ಧ್ವನಿಯನ್ನು ಬಲಪಡಿಸಬೇಕೆಂಬ ನಮ್ಮ ಪ್ರಯತ್ನಗಳಿಗೆ ವಿಶೇಷ ಯಶಸ್ಸು ದೊರಕಿಲ್ಲ. ಹೊರನಾಡಿಗೆ ವಲಸೆ ಹೋಗುವವರು ಕನ್ನಡ ಸಾಹಿತ್ಯವನ್ನು ಗಂಭೀರವಾಗಿ ಓದಿರುವುದಿಲ್ಲ. ಕನ್ನಡದ ದಿನ ಪತ್ರಿಕೆಗಳು ಹಾಗೂ ಇತರ ಮಾಧ್ಯಮಗಳು ವರದಿ ಮಾಡಿದ್ದಷ್ಟೇ ನಮಗೆ ಲಭಿಸುವ ಕನ್ನಡ ಮತ್ತು ಕರ್ನಾಟಕ. ಇಂಥ ಪ್ರತಿಕೂಲ ಪರಿಸರದಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಉಳಿಸಿಕೊಳ್ಳುವುದು ಮತ್ತು ಅದರಲ್ಲಿ ಸಾಹಿತ್ಯದ ಕೆಲಸಗಳನ್ನು ಮಾಡುತ್ತಾ ಹೋಗುವುದು ಯಾವಾಗಲೂ ಸವಾಲಿನ ವಿಷಯ.

ಕನ್ನಡವಿಲ್ಲದ ಪರಿಸರದಲ್ಲಿ ಬದುಕುತ್ತಿರುವ ನಾವೆಲ್ಲ ಆ ಭಾಷೆಯ ಬಗೆಗೆ ಭಾವುಕರಾಗಿರುವುದೇ ಹೆಚ್ಚು. ಹಾಗಾಗಿ ನಮಗೆ ಕನ್ನಡದಲ್ಲಿ ದೊರಕ್ಕಿದ್ದೆಲ್ಲವೂ ಚೆನ್ನದಂತೆ ಭಾಸವಾಗುತ್ತದೆ. ಆ ಭಾಷೆಯಲ್ಲಿ ಬರೆದದ್ದೆಲ್ಲವೂ ಅನನ್ಯವಾಗಿರುವಂತೆ ತೋರುತ್ತದೆ. ಇಂಥ ಅ-ವಿಮರ್ಶಾತ್ಮಕವಾದ ಮೆಲುದನಿಯೇ ಇಲ್ಲಿನ ೪೨ ಲೇಖನಗಳ ಪ್ರಧಾನ ಭೂಮಿಕೆಯನ್ನು ರೂಪಿಸಿದೆ. ಹೀಗೆ ಹೇಳಲು ನನಗೆ ಸಂಕೋಚವೇನಿಲ್ಲ. ಏಕೆಂದರೆ ಇಷ್ಟಾದರೂ ಮಾಡದಿದ್ದರೆ ಈ ಹೊತ್ತಿಗೆ ನನ್ನೊಳಗಿನ ಕನ್ನಡ ಕಾಣೆಯಾಗಿ ಬಿಡುತ್ತಿತ್ತು. ಬರವಣಿಗೆಯು ನನಗೆ ನನ್ನಲ್ಲಿ ಕನ್ನಡವನ್ನು ಉಳಿಸುವ ಕೆಲಸ. ಬರೆಯದ ಹೊರನಾಡ ಕನ್ನಡಿಗರು ಬಹಳ ಬೇಗ ಬೇರೆ ಭಾಷೆಗಳ ತೆಕ್ಕೆಗೆ ಸೇರಿಹೋಗುತ್ತಾರೆ.

ಕರ್ನಾಟಕದ ಒಳಗಡೆ ನಡೆಯುವ ಅಬ್ಬರದ ವಿಮರ್ಶೆಗಳ ನಡುವೆ ಇಂಥ ಮೆಲುದನಿಗಳಿಗೂ ಒಂದು ಸ್ಥಾನವಿದೆ ಎಂದು ನಾನು ನಂಬಿದ್ದೇನೆ. ಇಂಥ ನಂಬಿಕೆಯಲ್ಲಿಯೇ ಈ ಕೃತಿಯಲ್ಲಿರುವ ಅನೇಕ ಮುನ್ನುಡಿಗಳನ್ನು, ಲೇಖನಗಳನ್ನು ಬರೆದಿದ್ದೇನೆ.

ಕರ್ನಾಟಕದಿಂದ ಆಗಾಗ ಪ್ರೀತಿಯಿಂದ ಪುಸ್ತಕಗಳನ್ನು ಕಳಿಸಿಕೊಡುವ ಲೇಖಕ-ಲೇಖಕಿಯರಿಗೆ, ಬರೆದದ್ದನ್ನು ಪ್ರಕಟಿಸುವ ಪತ್ರಿಕೆಯ ಸ್ನೇಹಿತರಿಗೆ, ಈ ಕೃತಿಯನ್ನು ಹೊರ ತರುತ್ತಿರುವ ಯಾಜಿ ಪ್ರಕಾಶನದ ಶ್ರೀಮತಿ ಸವಿತಾ ಗಣೇಶ್ ಯಾಜಿ ದಂಪತಿಗಳಿಗೆ ನಾನು ಕೃತಜ್ಞನಾಗಿದ್ದೇನೆ.

**ಪುರುಷೋತ್ತಮ ಬಿಳಿಮಲೆ**

ದಶಂಬರ ೧, ೨೦೧೪

# ಪರಿವಿಡಿ


ಸವಿನುಡಿ / 5

ಮೆಲುದನಿಯ ಅರಿಕೆ / 7

೧ ಭಾರತೀಯ ಪಠ್ಯಗಳಲ್ಲಿನ ಅಶ್ಲೀಲತೆಯ ಪ್ರಶ್ನೆ / ೧

೨ ಗೌರೀಶ ಕಾಯ್ಕಿಣಿ ಅವರ ವೈಚಾರಿಕ ಕೃತಿಗಳು / ೬

೩ ದೇವನೂರ ಮಹಾದೇವ ಅವರ ಎದೆಗೆ ಬಿದ್ದ ಅಕ್ಷರ / ೧೫

೪ ಬಸವರಾಜ ತೂಲಹಳ್ಳಿ ಅವರ ಲೋಕಾಯತ ಮತ್ತು ಶಾಕ್ತ-ಶೈವ / ೧೯

೫ ಕೆ ಎಸ್ ನಿಸಾರ್ ಅಹಮದ್ ಅವರ ಕವಿತೆಗಳು / ೨೫

೬ ಸುಬ್ರಾಯ ಚೊಕ್ಕಾಡಿ ಅವರ ಕೃತಿ ಶೋಧ / ೩೬

೭ ಬೆಸಗರಹಳ್ಳಿ ರಾಮಣ್ಣ ಅವರ ಕಣಜ / ೪೪

೮ ರಾಘವೇಂದ್ರ ಪಾಟೀಲ ಅವರ ತೇರು / ೪೭

೯ ಮಲ್ಲಿಕಾರ್ಜುನ ಹಿರೇಮಠ ಅವರ ಕತೆಗಳು / ೫೦

೧೦ ಯಶವಂತ ಚಿತ್ತಾಲರ ಉತ್ತರವಿಲ್ಲದ ಕತೆಗಳು / ೬೬

೧೧ ಶಿವರಾಮ ಕಾರಂತ: ಶತಮಾನದ ವಿಸ್ಮಯ / ೭೨

೧೨ ವಿಷ್ಣು ನಾಯ್ಕರ ಜಂಗುಂ ಜಕ್ಕುಂ / ೭೫

೧೩ ಸಿ ಎನ್ ರಾಮಚಂದ್ರನ್ ಅವರು ಕನ್ನಡ ಜಾನಪದಕ್ಕೆ ನೀಡಿದ ಕೊಡುಗೆ / ೭೮

೧೪ ಚೆನ್ನಪ್ಪಗೌಡರ ಸಂಸ್ಕೃತಿ ಸಿರಿ / ೯೨

೧೫ ಪೂವಪ್ಪ ಕಣಿಯೂರು ಅವರ ಮೌಖಿಕ ಸಂಕಥನ / ೯೭

೧೬ ಅಶೋಕ ಆಳ್ವ ಅವರ ಸಿರಿ ಕಾವ್ಯಲೋಕ / ೧೦೨

೧೭ ವಿಶ್ವನಾಥ ಬದಿಕಾನ ಅವರ ಅರೆಭಾಷೆಯ ಅಜ್ಜಿ ಕತೆಗಳು / ೧೦೫

೧೮ ಮೋಹನ ಕುಂಟಾರ್ ಅವರ ಯಕ್ಷಗಾನ ಸ್ಥಿತ್ಯಂತರ / ೧೧೧

೧೯ ಗಾಯತ್ರಿ ನಾವಡರ ಕರಾವಳಿ ಜನಪದ
ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು / ೧೧೬

೨೦ ಕುಶಾಲ ಬರಗೂರು ಅವರ ಮೈತ್ರಿ ಭಾವದ ಚಾಮ ಚೆಲುವೆ / ೧೧೯

೨೧ ಉಷಾ ಅವರ ಕಾವ್ಯದಂಥಾ ನಾಟಕ: ಶೂಲಿ ಹಬ್ಬ / ೧೨೩

೨೨ ಎಲ್ಲಪ್ಪ ಕೆಕೆಪುರ ಅವರ ವೀರವನ್ತೆ ವನ್ಕೆ ದುರುಗವ್ವ / ೧೨೯
೨೩ ಸುಜಾತಾ ಅಕ್ಕಿ ಅವರ ಮಲೆಯಾಳೀ ಪೆಣ್‌ಕುಟ್ಟಿ / ೧೩೨
೨೪ ಕಾ ತ ಚಿಕ್ಕಣ್ಣ ಅವರ ನಿಶಬುದದೆಡೆಗೆ / ೧೩೭
೨೫ ಸುಧಾ ಚಿದಾನಂದಗೌಡರ ಪ್ರಿಯ ಸಖೀ ಪಾತರಗಿತ್ತೀ / ೧೪೨
೨೬ ಜಿ ಎ ಬಿರಾದಾರ ಅವರ ಮುಂಬಯಿ ಕರ್ನಾಟಕದಲ್ಲಿ
ಸವಿನಯ ಕಾನೂನು ಭಂಗ ಚಳುವಳಿ / ೧೫೦
೨೭ ವನಮಾಲಾ ಕಟ್ಟಿಗೌಡರ ರೆಕ್ಕೆಗಳಿಲ್ಲದ ಹಕ್ಕಿಯ ಕತೆಗಳು / ೧೫೬
೨೮ ಕೃಷ್ಣಮೂರ್ತಿ ಕಲುಮಂಗಿ ಅವರ ಕೌಟುಂಬಿಕ ಕತೆಗಳು / ೧೬೧
೨೯ ಯಕ್ಷ ದಿಗ್ಗಜರ ಆತ್ಮಕಥನಗಳು / ೧೬೫
೩೦ ಪ್ರಮೀಳಾ ಮಾಧವ ಅನುವಾದಿಸಿದ ಆದಿಮ ಜಾತಿ ಚಮಾರ್ ಪುಸ್ತಕ / ೧೬
೩೧ ಕರುಣಾಕರ ನಿಡಿಂಜಿಯವರ ನೀಲಿ ದಾರಿ / ೧೭೨
೩೨ ಕಾತ್ಯಾಯಿನಿ ಕುಂಜಿಬೆಟ್ಟು ಅವರ ಸಂಶೋಧನೆ / ೧೭೯
೩೩ ಮಾಧವ ಪೆರಾಜೆಯವರು ಅನುವಾದಿಸಿದ
ಕಾಲದ ಸಂಕ್ಷಿಪ್ತ ಇತಿಹಾಸ / ೧೮೪
೩೪ ರೇಣುಕಾ ನಿಡಗುಂದಿಯವರ ಕಣ್ಣ ಕಣಿವೆ / ೧೮೯
೩೫ ಬಾಲಕೃಷ್ಣ ನಾಯ್ಕ್ ಅವರ ಬೆಳಕಿನ ಪಾದ / ೧೯೨
೩೬ ಆರ್ ಜಿ ಹೆಗಡೆ ಅವರ ಕೊನೆಗೆ ಉಳಿಯುವುದು ಕಣ್ಣು / ೧೯೬
೩೭ ಅವನೀಂದ್ರನಾಥರಾವ್ ಅವರ ಸಮಯ ಸಂದರ್ಭ / ೨೦೧
೩೮ ಸ್ಮಿತಾ ಅಮೃತರಾಜ್ ಅವರ ಅಂಗಳದಂಚಿನ ಇಣುಕುಗಳು / ೨೦೫
೩೯ ಸಂಗೀತ ರವಿರಾಜ್ ಅವರ ನನ್ನೊಡಲ ಮಿಹಿರ / ೨೦೯
೪೦ ಅರೆಭಾಷೆಯ ಸಬಲೀಕರಣ / ೨೧೩
೪೧ ಶಾಸ್ತ್ರೀಯ ಭಾಷೆ: ಒಂದು ಟಿಪ್ಪಣಿ / ೨೧೯
೪೨ ಹೊಸ ಹಾದಿಗಳ ಕಡೆಗೆ / ೨೨೬

# ೧

# ಭಾರತೀಯ ಪಠ್ಯಗಳಲ್ಲಿನ ಅಶ್ಲೀಲತೆಯ ಪ್ರಶ್ನೆ

ಪ್ರೊ. ವೆಂಡಿಡಾನಿಗರ್ ಅವರು ಹಿಂದೂ ಪಠ್ಯಗಳ ಬಗೆಗೆ ನಡೆಸಿದ ಅಧ್ಯಯನಗಳನ್ನು ಭಾರತದ ಕೆಲವು ಮೂಲಭೂತವಾದೀ ಸಂಘಟನೆಗಳು ವಿರೋಧಿಸಿವೆ, ಮಾತ್ರವಲ್ಲ ಅವರ ಪುಸ್ತಕಗಳನ್ನು ಮಾರುಕಟ್ಟೆಯಿಂದ ಹಿಂಪಡೆಯಲು ಕಾನೂನಿನ ಮೊರೆ ಹೋಗಿ ತಕ್ಕ ಮಟ್ಟಿನ ಯಶಸ್ಸನ್ನೂ ಪಡೆದಿವೆ. ಡಾನಿಗರ್ ಅವರ ವ್ಯಾಖ್ಯಾನಗಳು ಅಶ್ಲೀಲ ಮತ್ತು ಹಿಂದೂಗಳ ಭಾವನೆಗಳಿಗೆ ನೋವುಂಟು ಮಾಡುವಂಥದ್ದು ಎಂದು ಪುಸ್ತಕದ ಕುರಿತು ನ್ಯಾಯಾಲಯದಲ್ಲಿ ವಾದಿಸಲಾಗಿದೆ. ಶ್ರೀ ಯೋಗೇಶ್ ಮಾಸ್ಟರ್ ಅವರು ಬರೆದ ಢುಂಢಿ ಕೃತಿಯಲ್ಲಿ ಗಣಪತಿಯ ಬಗೆಗ ಆಕ್ಷೇಪಾರ್ಹ ಅಂಶಗಳಿವೆ ಮತ್ತು ಐತಿಹಾಸಿಕವಾಗಿ ಇವು ಸುಳ್ಳು ಎಂದು ವಾದಿಸಿ, ಲೇಖಕರನ್ನು ಸೆರೆಮನೆಗೆ ತಳ್ಳಿದ್ದೂ ಆಯಿತು. ಡಾ. ಕೆ ವೈ ನಾರಾಯಣ ಸ್ವಾಮಿಯವರು ಬರೆದ ನಾಟಕವೊಂದರಿಂದ ತಮ್ಮ ಭಾವನೆಗಳಿಗೆ ನೋವಾಗಿದೆಯೆಂದು ಜೈನರೂ ಸಿಡಿದೆದ್ದಿದ್ದಾರೆ. ಇಂಥ ಆಕ್ಷೇಪಗಳು ಇವತ್ತು ಲಿಖಿತ ಪಠ್ಯಗಳಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಈಚೆಗೆ ಮಂಗಳೂರಲ್ಲಿ ಸಿಕ್ಕ ಪ್ರಖ್ಯಾತ ಯಕ್ಷಗಾನ ಹಾಸ್ಯ ಕಲಾವಿದರೊಬ್ಬರು ಹೇಳುತ್ತಿದ್ದರು– 'ಈಗ ನಮಗೇನೂ ಕೆಲಸ ಇಲ್ಲ ಮಾರಾಯ್ರೆ.. ಯಾರನ್ನೂ ಹಾಸ್ಯ ಮಾಡುವಂಗಿಲ್ಲ, ಏನು ಹೇಳಿದರೂ ಯಾರಾದರೊಬ್ಬರಿಗೆ ಸಿಟ್ಟು ಬರ್ತದೆ, ಬೆಳಿಗ್ಗೆ ಮನೆಗೆ ಹೊರಡುವಾಗ ಹೊಡಿಲಿಕ್ಕೆ ಬರ್ತಾರೆ..' ಅಂತ. ಪ್ರಖ್ಯಾತ ಮೇಳವೊಂದರ ಹಾಸ್ಯಗಾರನ ಮೇಲೆ ಹಲ್ಲೆಯೂ ನಡೆದಿದೆ. ಹೀಗೆ ಹೊಸದಾಗಿ ಯೋಚಿಸುವ, ಮಾತಾಡುವ ಮತ್ತು ಬರೆಯುವ ಸೃಜನಶೀಲ ಮನಸುಗಳ ಮೇಲೆ ನಿರಂತರ ಧಾಳಿ ನಡೆಯುತ್ತಿದೆ ಮಾತ್ರವಲ್ಲ, ಈಚಿನ ದಿನಗಳಲ್ಲಿ ಅದು ಹೆಚ್ಚಾಗುತ್ತಿದೆ. ಅಸಹನೆ ಪ್ರಜಾಪ್ರಭುತ್ವಕ್ಕೆ ಮಾರಕ ಮತ್ತು ಅದು ಮಾನವನ ವಿಕಾಸವನ್ನು ತಡೆ ಹಿಡಿಯುತ್ತದೆ. ಈ ವಿಷಯದಲ್ಲಿ ಎಲ್ಲ ಧರ್ಮದ ಮೂಲಭೂತವಾದಿ